**ವಿಷಯ : ಸೇಡಂ ಕ್ಷೇತ್ರದಲ್ಲಿ ನೈಜಾಂ ಕಾಲದ ಕೆರೆಗಳ ದುರಸ್ತಿ.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 387 (669)

ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ಕ್ಷೇತ್ರದಲ್ಲಿ ನೈಜಾಂ ಕಾಲದ ಕೆರೆಗಳು ಒಡೆದು ಹೋಗಿ ಸಾವಿರಾರು ಎಕರೆ ನೀರಾವರಿಗೆ ಅನಾನುಕೂಲವಾಗಿದ್ದು ನಿಜವಲ್ಲವೇ?

ಆ) ನಿಜವಿದ್ದರೆ ಇದಕ್ಕೆ ಮೊದಲು ಇದೇ ಸದನದಲ್ಲಿ ದುರಸ್ತಿಗಾಗಿ ಇವುಗಳನ್ನು ವೀಕ್ಷಿಸಿ ಸಮೀಕ್ಷೆ ಮಾಡಲು ವ್ಯವಸ್ಥೆ ಮಾಡಲಾಗಿದೆ ಎಂದು ತಿಳಿಸಿ, ಸುಮಾರು ಎರಡು ವರ್ಷಗಳಿಂದ ವಿಳಂಬ ಮಾಡಲು ಕಾರಣವೇನು?

ಇ) ಈಗಲಾದರೂ ಸರ್ಕಾರ ಈ ನೈಜಾಂ ಕಾಲದ ಕೆರೆಗಳಾದ ಸೇಡಂ ತಾಲ್ಲೂಕಿನ ಬೊಂದೆಮಪಲ್ಲಿ ಕೆರೆ, ತಿಮ್ಮಾಪುರ ಕೆರೆ, ರಾಮ ಕರೆ,- ಅನಂತಪುರ ಪಟೇಲ ಕೆರೆ-ಖಂಡ್ರೆಪಲ್ಲಿ ನಾಚವಾರು ಕೆರೆ, ಅಡಕಿ ಕೆರೆ ಕಾಲುವೆಗಳ ದುರಸ್ತಿ, ಯಲ್ಲಮ್ಮ ಕೆರೆ ದೇವನೂರು ಇತ್ಯಾದಿ ಹಾಗೂ ಸೇಡಂ ಕ್ಷೇತ್ರದ ಚಿತ್ತಾಪುರ ತಾಲ್ಲೂಕಿನ ಅಳ್ಳಳ್ಳಿಯ ಪುಂಡಿಪಲ್ಲಿ ಹಾಗೂ ಸೈದಲ ಕೆರೆ ಯಾಗಾಪೂರದ ದೊಡ್ಡ ಕೆರೆ ಇತ್ಯಾದಿಗಳ ದುರಸ್ತಿ ಮಾಡಿ ಆ ಭಾಗದ ರೈತರಿಗೆ ಸಾವಿರಾರು ಎಕರೆ ನೀರಾವರಿಗಾಗಿ ಅನುಕೂಲ ಮಾಡಿಕೊಡುವುದೇ?

ಶ್ರೀ ಎಂ.ಪಿ. ಕೇಶವಮೂರ್ತಿ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) 8 ಕೆರೆಗಳು ಮತ್ತು 7 ಆಣೆಕಟ್ಟುಗಳು ಒಡೆದು ಹೋಗಿದ್ದು, ಸುಮಾರು 318 ಹೆಕ್ಟೇರ್ ಜಮೀನಿಗೆ ಅನಾನುಕೂಲವಾಗಿರುತ್ತದೆ.

ಆ) ಇವುಗಳ ಪೈಕಿ 5 ಕೆರೆಗಳು ಮತ್ತು 2 ಆಣೆಕಟ್ಟುಗಳನ್ನು ದುರಸ್ತಿಗೊಳಿಸಿ ನೀರಾವರಿ ಸೌಲಭ್ಯ ಒದಗಿಸಿರುತ್ತದೆ. ಮುಂದುವರೆದು 1 ಕೆರೆ ಮತ್ತು 1 ಆಣೆಕಟ್ಟು ದುರಸ್ತಿ ಕಾರ್ಯಕ್ರಮವನ್ನು 1994-95ನೇ ಸಾಲಿನ ಜಿಲ್ಲಾ ಪಂಚಾಯತ್ ಆಯವ್ಯಯದಲ್ಲಿ ಸೇರಿಸಲಾಗಿದ್ದು, ಪೂರ್ಣಗೊಳಿಸಲಾಗುವುದು. ಉಳಿದ ಕಾಮಗಾರಿಗಳನ್ನು ಹಂತ ಹಂತವಾಗಿ ತೆಗೆದುಕೊಳ್ಳಲಾಗುವುದು.

ಇ) ಈ ಕಾಮಗಾರಿಗಳನ್ನು ಹಂತ ಹಂತವಾಗಿ ಅನುದಾನದ ಲಭ್ಯತೆಗನುಗುಣವಾಗಿ ಕೈಗೊಳ್ಳಲಾಗುವುದು.

**ವಿಷಯ : ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಅಂಗವಿಕಲ ಬೆರಳಚ್ಚುಗಾರರನ್ನು ನೇಮಕಗೊಳಿಸುವುದು.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 388 (731)

ಶ್ರೀ ಪಿ. ಬಸವರಾಜ್ (ಬ್ರಹ್ಮಾವರ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಉಡುಪಿ ತಾಲ್ಲೂಕು ಅಂಜಾರು ಮತ್ತು ಕುಕ್ಕೆಹಳ್ಳಿ ಗ್ರಾಮದ ಸಂಪರ್ಕದ ಬಜೆಯಲ್ಲಿ ಅಪೂರ್ಣ ಕಾಲು ಸೇತುವೆಯನ್ನು ಪೂರ್ಣಗೊಳಿಸುವಲ್ಲಿ ನಾಗರೀಕರು ಸತತವಾಗಿ ಒತ್ತಾಯಿಸುತ್ತಿರುವುದು ನಿಜವೇ?

ಆ) ಸದರಿ ಕಾಮಗಾರಿಯು ಅಪೂರ್ಣವಾಗಿರುವುದರಿಂದ ಸಾರ್ವಜನಿಕರಿಗೆ ತುಂಬಾ ತೊಂದರೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಸದರಿ ಕಾಮಗಾರಿಯ ಆಡಳಿತಾತ್ಮಕ ಅನುಮೋದನೆಯ ವಿಷಯದ ಬಗ್ಗೆ ಸರ್ಕಾರದ ಮುಂದಿದೆಯೇ, ಹಾಗಿದ್ದಲ್ಲಿ, ಯಾವಾಗ ಈ ಕಾಮಗಾರಿಯನ್ನು ಪೂರ್ಣಗೊಳಿಸಲಾಗುವುದು?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) ಈಗಿರುವ ಕಾಲು ಸೇತುವೆಯು ಉಡುಪಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವುದಕ್ಕೆ ಕಟ್ಟಿರುವ ವೆಂಡೆಂಟ್ ಡ್ಯಾಂ ಕಾಲು ಸೇತುವೆ ಹಾದಿಯು ಸಿಬ್ಬಂದಿ ವರ್ಗಕ್ಕೆ ನಿರ್ವಹಣೆಗಾಗಿ ಇದೆ. ಉಡುಪಿ ತಾಲ್ಲೂಕು ಅಂಜಾರು ಮತ್ತು ಕುಕ್ಕೇಹಳ್ಳಿ ಗ್ರಾಮದ ಸಂಪರ್ಕದ ಬಜೆಯಲ್ಲಿ ಕಾಲು ಸೇತುವೆಗಾಗಿ ನಾಗರೀಕರು ಒತ್ತಾಯಿಸುತ್ತಿದ್ದಾರೆ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಇ) ಈ ಕಾಲು ಸೇತುವೆ ಕಾಮಗಾರಿಯು ಜಿಲ್ಲಾ ಪಂಚಾಯತ್ ವ್ಯಾಪ್ತಿಯಲ್ಲಿ ಬರುತ್ತದೆ. ಈ ಕಾಮಗಾರಿಗೆ ರೂ. 28.00 ಲಕ್ಷಕ್ಕೆ ರೇಖಾ ಅಂದಾಜು ಪಟ್ಟಿಯು ಬಂದಿದೆ. ವಿವರವಾದ ಅಂದಾಜು ಪಟ್ಟಿ ತರಿಸಿಕೊಂಡು ಪರಿಶೀಲಿಸಿ ಅನುದಾನಕ್ಕೆ ಅನ್ವಯ ಕಾಮಗಾರಿ ತೆಗೆದುಕೊಂಡು ಪೂರ್ಣಗೊಳಿಸಲಾಗುವುದು.

**ವಿಷಯ : ರಾಷ್ಟ್ರೀಯ ಹೆದ್ದಾರಿಗಳು.**

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 390 (238)

ಶ್ರೀ ಪಿ. ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯ ಸರ್ಕಾರದಿಂದ ಕೇಂದ್ರ ಸರ್ಕಾರಕ್ಕೆ ಪ್ರಸ್ತಾಪಿಸಲಾದ ರಾಷ್ಟ್ರೀಯ ಹೆದ್ದಾರಿಗಳು?

ಆ) ಇವುಗಳ ಪೈಕಿ,ಕೇಂದ್ರದಿಂದ ತೀರುವಳಿಯಾಗಿರುವುದರ ಸಂಖ್ಯೆ;

ಇ) 1993-94ರಲ್ಲಿ ತೆಗೆದುಕೊಳ್ಳಲಾದ ರಾಷ್ಟ್ರೀಯ ಹೆದ್ದಾರಿಗಳ ಹೆಸರು;

ಈ) 1994-95ನೇ ಸಾಲಿನಲ್ಲಿ ಈ ರಾಷ್ಟ್ರೀಯ ಹೆದ್ದಾರಿಗಳಿಗೆ ಮಾಡಲಾಗಿರುವ ಆಯವ್ಯಯ ಹಂಚಿಕೆಗಳ ವಿವರಗಳು;